

# ಫೋಟೋಗಳನ್ನು ಓದುವ ಬಗೆ



**ಪ್ರತಿಯೊಂದು ಫೋಟೊದ ಹಿಂದೆ ಒಂದು ಕಥೆಯಿರುತ್ತದೆ. ಉಪಕಥನಗಳೂ ಒಳಕಥನಗಳೂ ಇರುತ್ತವೆ. ಅದರಲ್ಲೂ ರಾಜಕಾರಣಿಗಳ ಮೂಲಕ ರೂಪುಗೊಳ್ಳುವ ಫೋಟೊಗಳಲ್ಲಿನ ಬಿಂಬಗಳಲ್ಲಿ ಕಾಣುವ ಸಂದೇಶಗಳ ಜೊತೆಗೆ, ಸೂಚ್ಯವಾದ ಸಂಕೇತಗಳೂ ಅಡಗಿರುತ್ತವೆ. ಆ ಸೂಚನೆ-ಸಂಕೇತಗಳ ಸೂಕ್ಷ್ಮಗಳನ್ನು ಅರಿಯುವ ಕಣ್ಣು ನಮ್ಮದಾಗಲು ಒಂದಷ್ಟು ಸಿದ್ಧತೆ ಬೇಕು. ರಾಜಕಾರಣಿಗಳ ಬಿಂಬಜನ್ಯ ಸಂವಹನವನ್ನು ಹಲವು ಉದಾಹರಣೆಗಳ ಮೂಲಕ ವಿಶ್ಲೇಷಿಸುವ ಈ ಬರಹ, 'ಸುದ್ದಿ ಛಾಯಾಚಿತ್ರ'ಗಳನ್ನು ಓದುವ ರೀತಿಯನ್ನು ಕಾಣಿಸುತ್ತದೆ.**

■ ............................................ ರವಿಕುಮಾರ್ ಕಾಶಿ



### ಓದುಗ ನೋಡುಗನಾದಾಗ

ಒಂದು ಚಿತ್ರವು ಸಹಸ್ರ ಶಬ್ದಕ್ಕೆ ಸಮ ಎನ್ನುತ್ತಾರೆ. ಆದರೆ ನಾವಿಂದು ಬಿಂಬಗಳಿಂದ ತುಂಬಿ ತುಳುಕುವ ಸಮಯದಲ್ಲಿ ಇದ್ದೇವೆ. ಛಾಯಾಚಿತ್ರಣದ ಸೌಲಭ್ಯವಿರುವ ಸ್ಮಾರ್ಟ್ ಫೋನ್‌ಗಳಿಂದಾಗಿ ಎಲ್ಲರೂ ಛಾಯಾಚಿತ್ರಕಾರರೇ. ಅಂತರ್ಜಾಲದ ತುಂಬೆಲ್ಲ ಬಿಂಬವೇ. ಇಪ್ಪತ್ನಾಲ್ಕು ಗಂಟೆ ಸುದ್ದಿ ಪ್ರಸರಣದ ಈ ದಿನಗಳಲ್ಲಿ ದೃಶ್ಯಕ್ಕೆ ಬಹಳ ಪ್ರಾಮುಖ್ಯತೆ. ಬಹುತೇಕ ಟಿ.ವಿ.ಯಲ್ಲಿ ಕಂಡುಬರುವ ಚಿತ್ರಗಳೇ ಮುದ್ರಣಮಾಧ್ಯಮದಲ್ಲೂ ಬಳಕೆಯಾದರೂ ಅಲ್ಲೊಂದು ವ್ಯತ್ಯಾಸ ಇದೆ. ಸಾಂಪ್ರದಾಯಿಕ ಮುದ್ರಣ ಮಾಧ್ಯಮದಲ್ಲಿ ಸಹ ಸುದ್ದಿಗೆ ಅಧಿಕೃತತೆ ಬರಲು ಚಿತ್ರಗಳನ್ನು ಬಳಸುವ ಪರಿಪಾಠ ಇದ್ದರೂ ಅದರೊಂದಿಗೆ ಸಂಪಾದಕೀಯ, ಸುದ್ದಿ ವಿಮರ್ಶೆ ಇವೆಲ್ಲ ಇರುವುದರಿಂದ ಓದುಗನಿಗೆ ಆ ಚಿತ್ರವನ್ನು ಒಂದು ಸಂದರ್ಭದಲ್ಲಿ ಇಟ್ಟು ನೋಡಲು ಸಾಧ್ಯವಾಗುತ್ತದೆ.

ಮೊದಲ ಪುಟದಲ್ಲಿನ/ಮುಖಪುಟದಲ್ಲಿನ ಚಿತ್ರದಿಂದ ಆಕರ್ಷಿತನಾದರೂ ನೋಡುಗರು ಮಿಕ್ಕ ಬರಹವನ್ನೂ ಓದುವುದರಿಂದ ಆ ಚಿತ್ರದ ಗ್ರಹಿಕೆ ಬೇರೆಯದೇ ಪಾತಳಿಯಲ್ಲಿ ಆಗುತ್ತದೆ. ಆದರೆ ಇಂದು ದೃಶ್ಯಮಾಧ್ಯಮದ ಹೆಚ್ಚಾದ ಬಳಕೆಯಿಂದಾಗಿ ಓದುಗ ನೋಡುಗನಾಗಿಬಿಟ್ಟಿದ್ದಾನೆ. ಟಿ.ವಿ. ಸುದ್ದಿಗಳಲ್ಲಿ ಅದೇ ದೃಶ್ಯವನ್ನು ಪದೇ ಪದೇ ತೋರಿಸಿ ಪುನರಾವರ್ತನೆ ಮಾಡುವುದರಿಂದ ಆ ಬಿಂಬವು ಸುಪ್ತಪ್ರಜ್ಞೆಗೆ ಇಳಿದು ಮಿಕ್ಕ ವಿವರಗಳು ಮರೆಯಾಗಿಬಿಡುತ್ತವೆ. ಓದುವ ಪ್ರಕ್ರಿಯೆಗೆ ಬೇಕಾಗುವ ಏಕಾಗ್ರತೆ ನೋಡುವಾಗ ಬೇಕಾಗದಿರುವುದರಿಂದ ಇದು ಸುಲಭ. ನಾವು ಓದುವಾಗ ಹೆಚ್ಚಿನ ಇತರ ಚಟುವಟಿಕೆಗಳನ್ನು ಮಾಡಲು ಸಾಧ್ಯವಿಲ್ಲ. ಬಹಳವೆಂದರೆ ಓದುವ ಜೊತೆಗೆ ಟೀ ಕುಡಿಯಬಹುದು. ಓದುವುದು ಸಕ್ರಿಯವಾದ ಚಟುವಟಿಕೆ. ಆದರೆ ಟಿ.ವಿ. ನೋಡುವಾಗ ನಿಷ್ಕ್ರಿಯವಾಗಿ ನೋಡುತ್ತಾ ಇತರ ಎಷ್ಟೋ ಕೆಲಸಗಳನ್ನು ಮಾಡಬಹುದು. ಮತ್ತು ಅದು ಅಂಗಡಿ, ಏರ್‌ಪೋರ್ಟ್, ಆಸ್ಪತ್ರೆ, ಇತ್ಯಾದಿ ಸಾರ್ವಜನಿಕ ಸ್ಥಾನಗಳಲ್ಲಿ ಸದ್ದಿಲ್ಲದ ಮೂಕದೃಶ್ಯವಾಗಿ ನಮ್ಮನ್ನು ತಲುಪುತ್ತವೆ. ಈ ಕಾರಣದಿಂದಾಗಿ ಆ ದೃಶ್ಯಗಳು ನಮ್ಮ ಎಚ್ಚರಕ್ಕೇ ಬರದೆ, ನಮಗೆ ಅರಿವಿಲ್ಲದಂತೆಯೇ ನಮ್ಮ ಮನಸ್ಸನ್ನು ತೂರಿಬಿಡುತ್ತವೆ. ಅವು ಶಬ್ದಗಳನ್ನು ಬಳಸಿ ಸೃಷ್ಟಿಯಾದ ಬಿಂಬಗಳಲ್ಲ, ದೃಶ್ಯಜನ್ಯ ಬಿಂಬಗಳು.

ಇಂದಿನ ಹೆಚ್ಚಿನ ರಾಜಕಾರಣಿಗಳಿಗೆ ಈ ದೃಶ್ಯ ಸಂವಹನದ ಬಗ್ಗೆ ಬಹಳ ಎಚ್ಚರ ಇದೆ. ನಾವು ಯಾವ ರೀತಿ ಜನಕ್ಕೆ ಕಾಣಿಸಿಕೊಳ್ಳಬೇಕು, ಯಾವ ರೀತಿ ಕಾಣಿಸಿಕೊಳ್ಳುತ್ತಿದ್ದೇವೆ, ಯಾವುದು ತಮ್ಮ ರಾಜಕಾರಣಕ್ಕೆ ಲಾಭದಾಯಕ ಎಂಬ ಲೆಕ್ಕಾಚಾರ ಅವರ ಮನಸ್ಸಿನಲ್ಲಿ ಸದಾ ನಡೆದಿರುವಂತೆ ಕಾಣುತ್ತದೆ. ಆದುದರಿಂದಲೇ ಇಂದಿನ ಪ್ರಮುಖ ರಾಜಕಾರಣಿಗಳು ತಾವು ತೊಡುವ ಉಡುಪು, ನಿಲುವು, ಮುಖಭಾವ ಇವನ್ನೆಲ್ಲ ಹಿಂದಿನವರಿಗಿಂತ ಪ್ರಜ್ಞಾಪೂರ್ವಕವಾಗಿ ನಿರ್ವಹಿಸುತ್ತಾರೆ. ಹೀಗೆ ಮಾಡುವಾಗ ತಮ್ಮ ಸಾರ್ವಜನಿಕ ಬಿಂಬಕ್ಕೊಂದು ವಿಶಿಷ್ಟ ವ್ಯಕ್ತಿತ್ವವನ್ನು ಹುಟ್ಟುಹಾಕುತ್ತಾರೆ. ರಾಜಕಾರಣಿಗಳು ಈ ಬಿಂಬಗಳನ್ನು ಉತ್ಪಾದಿಸುತ್ತಾರಾದರೂ ಅದನ್ನು ಸೆರೆ ಹಿಡಿಯುವ







ಛಾಯಾಚಿತ್ರಕಾರ ಮತ್ತು ಅದನ್ನು ಬಳಸುವ ಚಿತ್ರ ಸಂಪಾದಕರ ಪಾತ್ರವನ್ನು ಇಲ್ಲಿ ಮರೆಯಲಾಗದು. ಮಾಧ್ಯಮದ ಉಪಸ್ಥಿತಿ ಎಷ್ಟು ಪ್ರಮುಖವೆಂದರೆ ಪ್ರತಿಭಟನಾಕಾರರು ಒಂದೆಡೆ ಸೇರಿದ್ದರೂ ಒಂದಷ್ಟು ಮಾಧ್ಯಮದವರು ಹಾಗೂ ಕೆಲವು ಓ.ಬಿ. ವ್ಯಾನ್‌ಗಳು ಕಾಣಿಸಿಕೊಳ್ಳುವ ತನಕ ಪೂರ್ಣಪ್ರಮಾಣದ ಪ್ರತಿಭಟನೆ ಆರಂಭವಾಗುವುದಿಲ್ಲ. ಘೋಷಣೆಗಳು ಮೊಳಗುವುದಿಲ್ಲ. ಎಲ್ಲ ಬಿಂಬಗಳೂ ಸಾಂಪ್ರದಾಯಿಕ ಸುದ್ದಿಮಾಧ್ಯಮದ ಮೂಲಕವೇ ಪ್ರಸಾರವಾಗಬೇಕಿಲ್ಲ. ಅವನ್ನು ಬದಿಗೆ ಸರಿಸಿ ಈ ಬಿಂಬಗಳು ಸೋಷಿಯಲ್ ಮೀಡಿಯಾಗಳಾದ ಟ್ವಿಟ್ಟರ್, ಇನ್ಸ್‌ಟಾಗ್ರಾಮ್, ಫೇಸ್‌ಬುಕ್ ಹೀಗೆ ಹಲವು ಬಗೆಗಳಲ್ಲಿ ಜನರನ್ನು ತಲುಪಬಹುದು.

## ಇದು ನಾನು - ಇದು ನಾನಲ್ಲ

ರಾಜಕಾರಣಿಗಳು ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವುದರಿಂದ ಅವರು ಸದಾ ತಮ್ಮ ಅಸ್ಮಿತೆಯನ್ನು ಸಾರಬೇಕಾಗುತ್ತದೆ. ಹಾಗಾಗಿ ಅವರು ಬಳಸುವ ಉಡುಪು, ಟೋಪಿ, ವೇಷಭೂಷಣಗಳು 'ಇದು ನಾನು' ಎಂದು ಜಗತ್ತಿಗೆ ತಿಳಿಯಪಡಿಸುವ ಸಾಧನವಾಗುತ್ತದೆ. ಅಪ್ಪಿತಪ್ಪಿಯೂ ಅವರು ಬೇರೆ ರೀತಿಯ ಪೋಷಾಕಿನಲ್ಲಿ ಕಾಣಿಸಿಕೊಂಡರೆ ಅದರಿಂದ ಆಭಾಸ ಉಂಟಾಗುವುದಲ್ಲದೆ, ಅವರ ಸಾರ್ವಜನಿಕ ಜೀವನಕ್ಕೆ ಧಕ್ಕೆಯೂ ಉಂಟಾಗುತ್ತದೆ, ಅಂತಲೇ ಎಲ್ಲ ಎಚ್ಚರ.

2015ರಲ್ಲಿ ಮೋದಿಯವರು ತಮ್ಮ ಹೆಸರಿರುವ ಪಿನ್ ಸ್ಟ್ರಿಪ್ ಸೂಟನ್ನು ತೊಟ್ಟಾಗ ಎಂತಹ ಪ್ರತಿಕೂಲ ವಿಮರ್ಶೆಗೆ ಒಳಗಾದರೆಂದರೆ ಮತ್ತೆಂದೂ ಅಂತಹ ಸೂಟನ್ನು ಅವರು ತೊಡಲಿಲ್ಲ. ಬಹುತೇಕರು ಅದನ್ನು ಅಹಂಕಾರದ ಚಿಹ್ನೆಯಾಗಿ ಕಂಡರು.

ಖಾದಿ ಪಂಚೆ, ಮೇಲುವಸ್ತ್ರಗಳನ್ನೇ ತಮ್ಮದಾಗಿಸಿಕೊಂಡವರು ಮಹಾತ್ಮ ಗಾಂಧಿ. ಅವರನ್ನು ಬಿಟ್ಟರೆ ಭಾರತದ ರಾಜಕಾರಣಿಗಳಲ್ಲಿ ಬಹುತೇಕ ನೇತಾರರು ಖಾದಿ ಅಥವಾ ಸಿಲ್ಕ್ ಜುಬ್ಬ, ಪಾಯಿಜಾಮ ಇವನ್ನು ತೊಡುವವರೇ. ತಮಿಳುನಾಡಿನ ಎರಡು ಪಕ್ಷಗಳ ನಾಯಕರು ಆಯಾ ಪಕ್ಷದ ಬಾವುಟದ ಬಣ್ಣದ ಅಂಚಿರುವ ಪಂಚೆಗಳನ್ನು ತೊಡುವುದನ್ನು ಬಿಟ್ಟರೆ ಐರೋಪ್ಯ ರೀತಿಯ ಸೂಟು ಬೂಟು ತೊಟ್ಟವರು ಬಹಳ ಕಮ್ಮಿ. ನೆಹರೂ ಕಾಲದಲ್ಲಿ ಪಠಾಣ್ ಸೂಟನ್ನು ಬದಲಾಯಿಸಿ ಭಾರತದ ನಾಯಕರು ಅಂತರರಾಷ್ಟ್ರೀಯ ಭೇಟಿಗಳಿಗೆ ತೊಡುವ ಅಧಿಕೃತ ಉಡುಪನ್ನಾಗಿ ಪರಿವರ್ತಿಸಲಾಗಿತ್ತು. ಒಂದು ಬಗೆಯ ಜಾಕೆಟ್ಟನ್ನು 'ನೆಹರೂ ಜಾಕೆಟ್' ಎಂದು ಕರೆದು ಬಳಸುತ್ತಿದ್ದರು. ಆದರೆ ಇಂದು ಕಾಂಗ್ರೆಸ್ ಅಧಿಕಾರದಲ್ಲಿಲ್ಲ. ಬೇರೆ ಪಕ್ಷದವರ ಉಡುಪಿನ ಶೈಲಿಯನ್ನು ತಾವು ಬಳಸಬಹುದೇ! ಹಾಗಾಗಿ ಇಂದಿನ ಪ್ರಧಾನಮಂತ್ರಿಯವರು ನೆಹರೂ ಜಾಕೆಟ್ ಕೊಂಚ ಬದಲಾಯಿಸಿ ಅದನ್ನು 'ಮೋದಿ ಜಾಕೆಟ್' ಮಾಡಿದ್ದಾರೆ. ಅವರ ಅನುಯಾಯಿಗಳು ಅದನ್ನೇ ತೊಡುವುದು. ಇತ್ತೀಚಿನ ಚುನಾವಣಾ ಪ್ರಚಾರಣಾ ಸಮಯದಲ್ಲಿ ರಾಹುಲ್ ಗಾಂಧಿಯವರು ಸಿಂಥೆಟಿಕ್ ಬಟ್ಟೆಯಲ್ಲಿ ತಯಾರಿಸಿದ ಜಾಕೆಟ್



ಅನ್ನು ತೊಡಲು ಆರಂಭಿಸಿದಾಗ ಅವರ ಜೊತೆಯವರು ಅದನ್ನೇ ತೊಟ್ಟು ತಮ್ಮ ನಾಯಕನನ್ನು ಬೆಂಬಲಿಸಿದರು.

## ನಾನೂ ನಿಮ್ಮವನೇ - ನಾನು ನಿಮ್ಮವನಲ್ಲ

ಹೊಸಬರನ್ನು ಭೇಟಿ ಮಾಡಿದಾಗ ಯಾರು ನಮ್ಮ ವಿಚಾರ, ಆಶಯ, ಭಾವನೆ ಇವುಗಳನ್ನು ಪ್ರತಿಫಲಿಸುತ್ತಾರೋ ಅಂತಹವರನ್ನು ನಾವು ಇಷ್ಟಪಡುತ್ತೇವೆ. ಅದು ಮನಶ್ಶಾಸ್ತ್ರೀಯವಾಗಿ ಸಹ ಸಂಶೋಧಿತವಾಗಿ ಸಿದ್ಧವಾದ ವಿಚಾರ. ಹಾಗಾಗಿ ತಾವು ಯಾವ ಜನಸ್ತೋಮವನ್ನು ಸಂಬೋಧಿಸುತ್ತಾರೋ ಆ ಜನರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದು ರಾಜಕಾರಣಿಗಳು ಬಳಸುವ ತಂತ್ರಗಳಲ್ಲಿ ಒಂದು. ಇದಕ್ಕಾಗಿ ಅವರು ಅನೇಕ ಉಪಾಯಗಳನ್ನು ಹೂಡುತ್ತಾರೆ. ಚುನಾವಣಾ ಪ್ರಚಾರಕ್ಕಾಗಿ ದೇಶದ ಬೇರೆ ಬೇರೆ ರಾಜ್ಯಗಳಿಗೆ ಭೇಟಿಯಿತ್ತಾಗ ಆಯಾ ಭಾಗದ ಭಾಷೆಯ ನಾಲ್ಕಾರು ವಾಕ್ಯಗಳಿಂದ ಭಾಷಣವನ್ನು ಆರಂಭ ಮಾಡುವುದು ಹಾಗೂ ಅಲ್ಲಿನ ಸ್ಥಳೀಯ ಮಹಾಪುರುಷರ ಗುಣಗಾನ ಮಾಡುವುದು ಅಂತಹ ಉಪಾಯಗಳಲ್ಲಿ ಸೇರಿವೆ. ಇದನ್ನು ದೃಶ್ಯರೂಪವಾಗಿ ಸಂವಹಿಸುವ ಇನ್ನೊಂದು ಸಾಧನವೆಂದರೆ ಸ್ಥಳೀಯ ಉಡುಪು, ಟೋಪಿ, ಇವನ್ನು ತೊಡುವುದು. ಈಶಾನ್ಯ ಭಾಗಕ್ಕೆ ಹೋದಾಗ ಬಿದಿರಿನ ಟೋಪಿ, ರಾಜಸ್ಥಾನಕ್ಕೆ ಹೋದಾಗ ಪಗಡಿ, ಕರ್ನಾಟಕದ ದಕ್ಷಿಣ ಭಾಗಕ್ಕೆ ಬಂದಾಗ ಮೈಸೂರು ಪೇಟ, ಹೀಗೆ. ಕೆಲವೊಮ್ಮೆ ಸ್ಥಳೀಯರೇ ಇಂತಹ ಪೇಟವನ್ನು ನೇತಾರರಿಗೆ ತೊಡಿಸುವುದುಂಟು. 2011ರಲ್ಲಿ ಗುಜರಾತಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮೌಲ್ವಿಯವರೊಬ್ಬರು ನೀಡಿದ ಮುಸಲ್ಮಾನರ ಟೋಪಿಯನ್ನು ಆಗ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ಮೋದಿಯವರು ಧರಿಸಲು ಒಪ್ಪಲಿಲ್ಲ. ಅವರು ನೀಡಿದ ಶಾಲನ್ನು ಮಾತ್ರ ಹಾಕಿಸಿಕೊಂಡರು. ಇದರಿಂದ ದೊಡ್ಡ ವಿವಾದವೇ ಉಂಟಾಗಿತ್ತು. ಅನೇಕರು 'ಇದು ನಾನು ನಿಮ್ಮವನಲ್ಲ' ಎಂದು ಹೇಳುವ ಪರಿಯೆಂದು ಮೋದಿ ಅವರ ನಡವಳಿಕೆಯನ್ನು ವ್ಯಾಖ್ಯೆ ಮಾಡಿದರು.

ಮಹಾತ್ಮ ಗಾಂಧಿಯವರು ದೇಶದ ಭಿನ್ನದನಿಗಳನ್ನು ಏಕತ್ರ ಕೂಡಿಸಲು ಸ್ಥಳೀಯ ಗುರುತುಗಳನ್ನು ಎತ್ತಿ ಹೇಳುವ ಬಗೆಬಗೆಯ ಪೇಟಗಳನ್ನು ಬದಿಗಿರಿಸಿ ಸಾಮಾನ್ಯ ರೈತಾಪಿ ಜನರು ಬಳಸುವ ಬಿಳಿ ಟೋಪಿಯನ್ನು ಎಲ್ಲರೂ ಧರಿಸುವಂತೆ ಒತ್ತಾಯಿಸಿದರು. ಮುಂದೆ ಅದು 'ಗಾಂಧಿ ಟೋಪಿ' ಎಂದೇ ಪ್ರಸಿದ್ಧವಾಯಿತು. ಬಹಳ ಕಾಲ ಅದು ರಾಜಕಾರಣಿಗಳ ಯೂನಿಫಾರ್ಮ್ ತರಹ ಬಳಕೆಯಾಗುತ್ತಿತ್ತು. ಈಗ ಕಡೆಗಾಲದಲ್ಲಿರುವ ಕೆಲವು ಸ್ವಾತಂತ್ರ್ಯಯೋಧರನ್ನು ಬಿಟ್ಟರೆ 'ಕಾಫಿಹೌಸ್'ನ ನೌಕರರು ಅದನ್ನು ತೊಡುತ್ತಾರೆ. 'ಆಮ್ ಆದ್ಮಿ'ಯಂತಹ ಕೆಲವು ಪಕ್ಷಗಳು ಗಾಂಧಿ ಟೋಪಿಯನ್ನು ಬಳಸಿದರೂ ಅದರ ಮೇಲೆ ತಮ್ಮ ಪಕ್ಷದ ಚಿಹ್ನೆಯನ್ನು ಹಾಕುತ್ತಾರೆ.

ರಕ್ಷಣಾಮಂತ್ರಿಗಳು ಸೇನಾನೆಲೆಗಳಿಗೆ ಭೇಟಿಯಿತ್ತಾಗ ಆಯಾ ಸೇನಾ ತುಕಡಿಯ ಸಮವಸ್ತ್ರವನ್ನು ಧರಿಸಿ 'ನಾನು ನಿಮ್ಮ ಜೊತೆಗಿದ್ದೇನೆ' ಎಂಬಂತಹ ಸಂದೇಶ ಕೊಡುತ್ತಾರೆ. ಹಾಗಾದರೆ

**ರಾಹುಲ್ ಗಾಂಧಿಯವರು ಸಿಂಥೆಟಿಕ್ ಬಟ್ಟೆಯಲ್ಲಿ ತಯಾರಿಸಿದ ಜಾಕೆಟ್ ಅನ್ನು ತೊಡಲು ಆರಂಭಿಸಿದಾಗ ಅವರ ಜೊತೆಯವರು ಅದನ್ನೇ ತೊಟ್ಟು ತಮ್ಮ ನಾಯಕನನ್ನು ಬೆಂಬಲಿಸಿದರು.**







Scanned with CamScanner

